ರಾಜ್ಯದಲ್ಲಿ ಮುಂಗಾರು ಹಲವು ಭಾಗಗಳಲ್ಲಿ ಕ್ಷೀಣವಾಗಿದ್ದು, 1992ರ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ 3 ರಿಂದ 4 ವಾರಗಳ ಕಾಲ ಮಳೆಬಾರದ ಪ್ರಯುಕ್ತ ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ಕೊಳ್ಳೆಗಾಲ ತಾಲ್ಲೂಕುಗಳಲ್ಲಿ ಬೆಳೆದು ನಿಂತಿದ್ದ ಪಸಲಿಗೆ ಸ್ವಲ್ಪ ತೊಂದರೆ ಉಂಟಾಗಿದ್ದಿತು. ಆದರೆ ಸೆಪ್ಟೆಂಬರ್ ತಿಂಗಳಿನಲ್ಲಿ ಬಿದ್ದ ಮುಂಗಾರು ಮಳೆಯಿಂದ ಮತ್ತು ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಿದ್ದ ಹಿಂಗಾರು ಮಳೆಯಿಂದ ಪರಿಸ್ಥಿತಿ ಬಹುಮಟ್ಟಿಗೆ ಸುಧಾರಿಸಿದೆ. ಈವರೆಗೆ ಚಾಮರಾಜನಗರ ತಾಲ್ಲೂಕಿನಲ್ಲಿ 684.4ಮೀ ಮೀಟರ್ ಮಳೆ ಬಿದ್ದಿದೆ. ಇದರಿಂದಾಗಿ ಪೈರುಗಳು ಪುನಃ ಚೇತನಗೊಂಡು ಪರಿಸ್ಥಿತಿ ಸುಧಾರಿಸಿದೆ. ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಅಲ್ಲಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದ್ದು ತದನಂತರ ಬಂದ ಮಳೆಯಿಂದಾಗಿ ಈ ಸಮಸ್ಯೆ ಇರುವುದಿಲ್ಲ. ಆದರೂ ಕೂಡ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಉದ್ಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಮೈಸೂರು ಜಿಲ್ಲಾಧಿಕಾರಿಯವರಿಗೆ ಮತ್ತು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಸರ್ಕಾರವು ಈಗಾಗಲೇ ಸೂಚನೆ ನೀಡಿದೆ.

1991–92 ಮತ್ತು 1992–93ನೇ ಸಾಲಿನಲ್ಲಿ ಮಳೆಯಿಂದ ಹಾನಿಗೊಳಗಾದ ಮನೆ ಮತ್ತು 1992–93ನೇ ಸಾಲಿನಲ್ಲಿ ಹಾನಿಗೊಳಗಾದ ಬೆಳೆಯ ಬಗ್ಗೆ

213 (330) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991–92 ಮತ್ತು 1992–93ನೇ ಸಾಲಿನಲ್ಲಿ ಮಳೆಯಿಂದ ಹಾನಿಯಾಗಿರುವ ಮನೆಗಳ ಸಂಖ್ಯೆ ಎಷ್ಟು ?

ಆ) 1992–93ನೇ ಸಾಲಿನಲ್ಲಿ ಎಷ್ಟು ಲಕ್ಷ ಎಕರೆಗಳಲ್ಲಿ ಬೆಳೆಗಳಿಗೆ ಹಾನಿ ಉಂಟಾಗಿದೆ ?

ಇ) ಸರ್ಕಾರದಿಂದ ಇದಕ್ಕಾಗಿ ಪರಿಹಾರ ರೂಪದಲ್ಲಿ ಎಷ್ಟು ಹಣ ಬಿಡುಗಡೆ ಆಗಿದೆ ಹಾಗೂ ಎಷ್ಟು ಹಣ ಹಂಚಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು)

ಈ) ಕೇಂದ್ರ ಸರ್ಕಾರದಿಂದ ಅದಕ್ಕಾಗಿ ಬಂದಿರುವ ನೆರವು ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ರಾಜ್ಯದಲ್ಲಿ 1991–92 ಮತ್ತು 1992–93ನೇ ಸಾಲಿನಲ್ಲಿ ಬಿದ್ದ ಅಧಿಕ ಮಳೆಯಿಂದ ಹಾನಿಗೊಳಗಾದ ಮನೆಗಳ ಸಂಖ್ಯೆ ಈ ಕೆಳಕಂಡಂತೆ ಇದೆ:

ವರ್ಷ	ಭಾಗಶಃ ಬಿದ್ದ ಮನೆಗಳು	ಪೂರ್ಣವಾಗಿ ಬಿದ್ದ ಮನೆಗಳು	ಒಟ್ಟು
1991–92	1,18,466	44.122	1,62,588
1992–93	2,23,345	57,422	2,80,767

ಆ) ಅಧಿಕ ಮಳೆಯಿಂದ ಉಂಟಾದ ಪ್ರವಾಹದಿಂದ 3,18,400 ಹೆಕ್ಟೇರ್‌ನಲ್ಲಿದ್ದ ಬೆಳೆ ನಾಶ ಹೊಂದಿದೆ.

ಇ) ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಸರ್ಕಾರವು 41.93

ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ 6.80 ಲಕ್ಷ ರೂ.ಗಳನ್ನು ಬೆಳೆ ಪರಿಹಾರವಾಗಿ ವಿತರಣೆ ಮಾಡಲಾಗಿದೆ. ವಿವರ ಕೆಳಕಂಡಂತೆ ಇದೆ:

1. ಚಿಕ್ಕಮಗಳೂರು ಜಿಲ್ಲೆ	0.30
2. ಶಿವಮೊಗ್ಗ ಜಿಲ್ಲೆ	4.52
3. ಚಿತ್ರದುರ್ಗ ಜಿಲ್ಲೆ	1.75
4. ಮೈಸೂರು ಜಿಲ್ಲೆ	0.23

ಉಳಿದ ಪ್ರಕರಣಗಳಲ್ಲಿ ಪ್ರತಿ ಹೆಕ್ಟೇರ್‌ಗೆ ರೂ. 500.00 ನಂತೆ, ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ವಿತರಣೆ ಮಾಡಲಾಗುವುದು.

ಈ) ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ವಾರ್ಷಿಕ ಅನುದಾನ ರೂ. 27.00 ಕೋಟಿ ನಿಗದಿಯಾಗಿದ್ದು, ಇದರಲ್ಲಿ ಕೇಂದ್ರದಿಂದ ರೂ. 20.25 ಕೋಟಿ ವಂತಿಕೆ ಮತ್ತು ರೂ. 6.75 ಕೋಟಿ ರಾಜ್ಯ ಸರ್ಕಾರದ ವಂತಿಕೆ ಆಗಿರುತ್ತದೆ.

ಈ ವರ್ಷದಲ್ಲಿ ಕೇಂದ್ರ ಸರ್ಕಾರ ವಾರ್ಷಿಕ ಅನುದಾನ ರೂ. 20.25 ಕೋಟಿಗಳೂ ಸೇರಿದಂತೆ, 1993–94ನೇ ಸಾಲಿನ ಒಂದನೇ ಮತ್ತು ಎರಡನೇ ಕಂತು 10.12 ಕೋಟಿ ರೂ.ಗಳನ್ನು, ಒಟ್ಟು 30.37 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ ಅಧಿಕ ಮಳೆಯಿಂದ ಸತ್ತವರ ಸಂಖ್ಯೆ

216 (441) ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಧಿಕ ಮಳೆಯಿಂದ ಸತ್ತವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಮೃತರ ವಾರಸುದಾರರಿಗೆ ಸರ್ಕಾರದಿಂದ ನೀಡಿರುವ ಪರಿಹಾರದ ಮೊಬಲಗೆಷ್ಟು ?

ಇ) ಪ್ರವಾಹ ಪರಿಹಾರ ನಿಧಿಗೆ ಕೇಂದ್ರ ಸರ್ಕಾರದಿಂದ ನೀಡಿರುವ ಪರಿಹಾರದ ಮೊಬಲಗೆಷ್ಟು ?

ಈ) ಮೃತರ ಸಂಬಂಧಿಕರಿಗೆ ಸರ್ಕಾರ ಕೆಲಸ ನೀಡುವಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವಾದರೂ ಏನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ನವೆಂಬರ್ ಮಾಹೆಯಲ್ಲಿ ಬೀಸಿದ ಬಿರುಗಾಳಿಯಿಂದ ಉಂಟಾದ ಪ್ರವಾಹ ಮತ್ತು ಮನೆ ಕುಸಿತದಿಂದ 115 ಜನರು ಸತ್ತಿದ್ದಾರೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತೆ ಇದೆ:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೃತರ ಸಂಖ್ಯೆ
1.	ರಾಯಚೂರು	43
2.	ಬಳ್ಳಾರಿ	17
3.	ಧಾರವಾಡ	18
4.	ಚಿತ್ರದುರ್ಗ	10